**<u>ಅಸಲು ದಾವಾ ಸಂಖ್ಯೆ - 157/2021</u>** **ಪಿ.ಡಬ್ಲ್ಯೂ:-1**

ದಿನಾಂಕಃ 16-10-2024 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಮ್ಮ ಜೊತೆ ಜಗಳ ಮಾಡಿದ್ದರಿಂದ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಅವಿದ್ಯಾವಂತೆ. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ ಬಗ್ಗೆ ಕ್ರಯ ಪತ್ರ ಮತ್ತು ಪಹಣಿಯನ್ನು ಹಾಜರುಪಡಿಸಿದ್ದೇನೆ. ದಾಖಲೆಗಳನ್ನು ನಾನೇ ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನನ್ನ ಗಂಡನ ಹೆಸರು ಹಾಲೇಶಪ್ಪ. ನನ್ನ ಗಂಡನ ತಂದೆಯ ಹೆಸರು ಆನಂದಪ್ಪ. ನನ್ನ ಮಾವರಿಗೆ **5** ಜನ ಮಕ್ಕಳು ಅದರಲ್ಲಿ ಒಬ್ಬರು ಹೆಣ್ಣು ಮಗಳು ಮತ್ತು **4** ಜನ ಗಂಡು ಮಕ್ಕಳು ಅದರಲ್ಲಿ ಒಬ್ಬ ಹೆಣ್ಣು ಮಗಳು ಮತ್ತು ಇಬ್ಬರು ಗಂಡು ಮಕ್ಕಳು ಅಂದರೆ ರಾಜಪ್ಪ, ಮಲ್ಲಿಕಪ್ಪ ಮತ್ತು ಕುಸುಮ ರವರು ಮೃತ ಹೊಂದಿರುತ್ತಾರೆ. ಈಗ ಹಾಲೇಶಪ್ಪ ಮತ್ತು ಲೋಕಪ್ಪ ಮಾತ್ರ ಜೀವಂತ ಇದ್ದಾರೆ. ಈ ದಿನ ನ್ಯಾಯಾಲಯಕ್ಕೆ ನನ್ನ ಯಜಮಾನರು ನನ್ನ ಜೊತೆಯಲ್ಲಿ ಬಂದಿರುತ್ತಾರೆ. ಕುಸುಮ ರವರಿಗೆ ಕುಮಾರ ಎಂಬ ಒಬ್ಬ ಗಂಡು ಮಗನಿದ್ದಾನೆ. ಮಲ್ಲಿಕಪ್ಪರವರು ತಮ್ಮ ಜೀವಿತ ಕಾಲದಲ್ಲಿ ಶಿಕ್ಷಕರಾಗಿದ್ದರು ಮತ್ತು ಮದುವೆಯಾಗದೇ ಮೃತ ಹೊಂದಿರುತ್ತಾರೆ. ರಾಜಪ್ಪರವರ ಹೆಂಡತಿಯ ಹೆಸರು ಮೈನಮ್ಮ. ಅವರಿಗೆ ಭಾಗ್ಯ ಮತ್ತು ಅಭಿ ಎಂಬ ಇಬ್ಬರು ಮಕ್ಕಳಿದ್ದಾರೆ. ನಮ್ಮ ಅತ್ತೆ ಈಗ ಜೀವಂತ ಇರುವುದಿಲ್ಲ. ನಮ್ಮ ಮಾವ ಆನಂದಪ್ಪ ದಾವಾ ಆಸ್ತಿಯನ್ನು ನಾಗರಾಜಪ್ಪರವರಿಂದ ಖರೀದಿ ಮಾಡಿದ್ದರು ತದನಂತರ ನಾವು ನಮ್ಮ ಮಾವನಿಂದ ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ತಂದೆ ತಾಯಿಯವರು ನನಗೆ ಕೊಟ್ಟ ಬಂಗಾರದ ಒಡವೆಗಳನ್ನು ಮಾರಾಟ ಮಾಡಿ ದಾವಾ

ಆಸ್ತಿಯನ್ನು ನಮ್ಮ ಮಾವನವರಿಂದ ನಾನು ಖರೀದಿ ಮಾಡಿದ್ದೇನೆ. ನನ್ನ ಬಂಗಾರದ ಒಡವೆಗಳನ್ನು ನ್ಯಾಮತಿಯ ಬಂಗಾರದ ಅಂಗಡಿಯಲ್ಲಿ ಮಾರಾಟ ಮಾಡಿದ್ದೇನೆ. ಸಾಕ್ಷಿಯು ಮುಂದುವರೆದು ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಾನು ನನ್ನ ಗಂಡ ಈಗಲೂ ಸಾಲವನ್ನು ಮಾಡಿಕೊಂಡು ಕಷ್ಟದಲ್ಲಿ ಜೀವನ ಮಾಡುತ್ತಿದ್ದೇವೆ ಎಂದರೆ ಸರಿ. ದಿನನಿತ್ಯ ಜೀವನವನ್ನು ನಡೆಸಲು ಸಹ ನಮಗೆ ಕಷ್ಟವಾಗುತ್ತಿದೆ ಎಂದರೆ ಸರಿ. ನನಗೆ ರಂಜಿತ, ರಕ್ಷಿತ ಮತ್ತು ನವೀನ ಎಂಬ **3** ಜನ ಮಕ್ಕಳಿದ್ದಾರೆ. ರಂಜಿತಾಗೆ **17** ವರ್ಷ, ರಕ್ಷಿತಾಗೆ **15** ವರ್ಷ ಮತ್ತು ನವೀನಾಗೆ **14** ವರ್ಷ ವಯಸ್ಸು. ನನ್ನ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಸಾಲ ಮಾಡಿದ್ದೆವು. ನಾನು ಮದುವೆಯಾದಾಗಿನಿಂದ ಇಲ್ಲಿಯವರೆಗೂ ನಾನು ನನ್ನ ಗಂಡ ಸಾಲ ಮಾಡಿಕೊಂಡು ಮತ್ತು ಸದರಿ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿಯನ್ನು ಕಟ್ಟುತ್ತಾ ಜೀವನವನ್ನು ಮಾಡುತ್ತಿದ್ದೇವೆ. ನಮ್ಮ ಮಾವನವರು ಕುಟುಂಬದ ಆಸ್ತಿಯ ಪರವಾಗಿ ನನ್ನ ಯಜಮಾನರಿಗೆ, **1** ನೇ ಪ್ರತಿವಾದಿಗೆ ಮತ್ತು ಮೃತ ರಾಜಪ್ಪನ ವಾರಸುದಾರರಿಗೆ ತಲಾ ¾ ಎಕರೆ ಜಮೀನನ್ನು ಕೊಟ್ಟಿದ್ದಾರೆ. ತಲಾ ¾ ಎಕರೆ ಜಮೀನಿನ ವಿಸ್ತೀರ್ಣ ಒಂದೇ ಭಾಗದಲ್ಲಿದೆ ಎಂದರೆ ಸರಿ. ನಮ್ಮ ಮಾವನವರು ತಮ್ಮ ಜೀವನಾಂಶಕ್ಕಾಗಿ **1** ½ ಎಕರೆ ಜಮೀನನ್ನು ಇಟ್ಟುಕೊಂಡಿದ್ದಾರೆ ಎಂದರೆ ಸರಿ. ನಮ್ಮ ಮಾವನವರು ತಮ್ಮ ಜೀವನಾಂಶಕ್ಕಾಗಿ ಇಟ್ಟುಕೊಂಡ **1** ½ ಎಕರೆ ಜಮೀನಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ನಮ್ಮ ಮಾವನವರು ಕುಟುಂಬ ಆಸ್ತಿಯಲ್ಲಿ ತಮ್ಮ ಮಗಳಿಗೆ ಯಾವುದೇ ಭಾಗಂಶವನ್ನು ಕೊಟ್ಟಿರುವುದಿಲ್ಲ. ಮಲ್ಲಿಕಪ್ಪರವರು ಮರಣಹೊಂದಿದ ನಂತರ ನಮ್ಮ ಮಾವನವರು ಕುಟುಂಬ ಆಸ್ತಿಯನ್ನು ಭಾಗಂಶ ಮಾಡಿದ್ದಾರೆ. ಸಾಕ್ಷಿಯು ಮುಂದುವರೆದು ನಮ್ಮ ಮದುವೆಯ ಪೂರ್ವದಲ್ಲಿಯೇ ನನ್ನ ಮಾವನವರು ಆಸ್ತಿಯನ್ನು ವಿಭಾಗ ಮಾಡಿದ್ದರು. ನನ್ನ ಮದುವೆಯ ಪೂರ್ವದಲ್ಲಿ ನಮ್ಮ ಅತ್ತೆ ಜೀವಂತ ಇದ್ದರು. ನಮ್ಮ ಮದುವೆಯಾದ **7-8** ವರ್ಷಗಳ ನಂತರ ತೀರಿಕೊಂಡಿರುತ್ತಾರೆ. ನಮ್ಮ ಮಾವನವರು ಕುಟುಂಬದ ಆಸ್ತಿಯನ್ನು ಭಾಗಾಂಶ ಮಾಡಿದ ನಂತರ ನನ್ನ ಯಜಮಾನರನ್ನು ನನ್ನ ಅತ್ತೆ ಮಾವಂದಿರು ನೋಡಿಕೊಳ್ಳುತ್ತಿದ್ದರು. ನನ್ನ ಮದುವೆ ಆದ ನಂತರ ನಮ್ಮ ಅತ್ತೆ ತೀರಿಕೊಂಡಿದ್ದು ತದನಂತರ ನಾನು ನನ್ನ

ಯಜಮಾನರು ನಮ್ಮ ಮಾವನವರನ್ನು ನೋಡಿಕೊಳ್ಳುತ್ತಿದ್ದೇವೆ. ಈಗ ನಾನು, ನನ್ನ ಯಜಮಾನರು, ನನ್ನ ಮಕ್ಕಳು ಮತ್ತು ನಮ್ಮ ಮಾವನವರು ಒಟ್ಟಿಗೆ ಇದ್ದೇವೆ. ನನ್ನ ಮದುವೆಯಾದಗಿನಿಂದ ಇಲ್ಲಿಯತನಕ ನಮ್ಮ ಮಾವನವರು ನಮ್ಮ ಜೊತೆಯಲ್ಲಿಯೇ ಇದ್ದಾರೆ. ನಮ್ಮ ಮಾವನವರು ನಮ್ಮ ಜೊತೆಯಲ್ಲಿ ಇದುದ್ದರಿಂದ ನಮ್ಮ ಮಾವನವರ ಭಾಗಾಂಶಕ್ಕೆ ಬಂದಂತಹ **1 ½** ಎಕರೆ ಜಮೀನಿನಲ್ಲಿ ನಾವೇ ಉಳುಮೆ ಮಾಡುತ್ತಿದ್ದೆವು. ನಮ್ಮ ಮಾವನವರ ಜೀವನಾಂಶಕ್ಕೆ ಕೊಟ್ಟಂತಹ **1 ½** ಎಕರೆ ಜಮೀನು ದಾವಾ ಆಸ್ತಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.